1 ನೇ ಹೆಚ್ಚುವರಿ ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಶಿರಸಿ.

ಕ್ರಿ ಮಿಸ್ ನಂ.70/2019

ಪಿ.ಡಬ್ಲ್ಯೂ:1

ಸತ್ಯಪ್ರತಿಜ್ಞೆಯ ಮೇರೆಗೆ : ದಿನಾಂಕ 13-02-2024

ಸಾಕ್ಷಿದಾರನ ಹೆಸರು : ಶ್ರೀಮತಿ ಅಮೀನಾಬಿ ಅಬ್ದುಲಖಾದರ

ಗಂಡನ ಹೆಸರು : ಅಬ್ದುಲ ಖಾದರಹಯಾತ ಸಾಬ ಮುಳಗುಂದ

ವಯಸ್ಸು : 32 ವರ್ಷ

ಉದ್ಯೋಗ : ಮನೆವಾರ್ತೆ

ವಾಸ್ತವ್ಯ : ಶಿರಸಿ

ಮುಖ್ಯ ವಿಚಾರಣೆ : ಶ್ರೀ ಹೆಚ್. ಎಮ್ .ಎನ್ ರವರಿಂದ :

ನಾನು ಈ ಪ್ರಕರಣದಲ್ಲಿ ಅರ್ಜಿದಾರಳು . ಎದುರುದಾರ ನನ್ನ ಗಂಡ. ನಮ್ಮ ಮದುವೆಯು ದಿನಾಂಕ 27-01-2016 ರಂದು ಶಿರಸಿಯ ಜವಳಿಶಾದಿ ಮಹಲ್‌ದಲ್ಲಿ ಮುಸ್ಲಿಂ ಧರ್ಮದಂತೆ ಗುರುಹಿರಿಯರ ಸಮ್ಮುಖದಲ್ಲಿ ಆಯಿತು. ವಿವಾಹದ ಸಮಯದಲ್ಲಿ ನನ್ನಿಂದ 60 ಸಾವಿರ ರೂ ಹಾಗೂ 5 ತೊಲೆ ಬಂಗಾರ ಎದುರುದಾರರ ಹಾಗೂ ಮನೆಯ ಜನರು ಪಡೆದುಕೊಂಡಿರುತ್ತಾರೆ . ನಾನು ಮದುವೆಯಾದ ನಂತರ ನನ್ನ ಗಂಡನ ಮನೆಯಲ್ಲಿ ಎದ್ರುದಾರನ ಸಂಗಡ ವಾಸಿಸುತ್ತೇದ್ದೆ. ಮದುವೆಯಾದ ನಂತರ ನನ್ನ ಗಂಡ 10-12 ವರ್ಷದ ನಂತರ ಎದುರುದಾರನು ಅಕ್ಕ ಹಾಗೂ ತಂಗಿಯ ಚಿತಾವಣಿಯಿಂದ ಕುಟುಂಬದವರ ಸಂಗಡ ಸೇರಿಕೊಂಡು ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಹೊರಿಸಿ ಸಂಶಯ ಪಡುವುದು ಹಾಗೂ ಅವಮಾನಿಸಿ ಹೊಡಿಯುವುದು ಮಾಡಿರುತ್ತಾನೆ . ಎದುರುದಾರನು ಹಾಗೂ ಆತನ ಅಕಕ-ತಂಗಿಯವರು ಹಾಗೂ ಕುಟುಂಬದ ಉಳಿದ ಸದಸ್ಯರು ಕೂಡಿಕೊಂಡು ನನ್ನನ್ನು ಮನೆಯಿಂದ ಹಣ ಹಾಗೂ ಬಂಗಾರ ತರುವಂತೆ ಪೀಡಿಸತೊಡಗಿದನು . ನಾನು ಎದ್ರುದಾರನು ಸುಧಾರಿಸಬಹದೆಂದು ಆಸೆಯೊಂದಿಗೆ ಎದ್ರುದಾರನೊಂದಿಗೆ ದಾಂಪತ್ಯ ಜೀವನ ನಡೆಸಿ ಬಂದೆನು . ಆತನ ಮನೆಯವರೂ ತಮ್ಮ ನಡೆತಯನ್ನು ಸುಧಾರಿಸಿಕೊಂಡಿದ್ದು ಇರುವುದಿಲ್ಲ . ಎದುದಾರನ

ಹಾಗೂ ಆತನ ಮನೆಯವರು ನನಗೆ ತೊಂದರೆ ನೀಡುವುದನ್ನು ಮುಂದುವರಸಿ ಹೊಡೆಬಡೆ ಮಾಡುವುದು ಮನೆಯಿಂದ ಹೊರ ಹಾಕುವುದು ವರದಕ್ಷಿಣೆ ತರುವಂತೆ ಪೀಡಿಸುವುದು ಮಾಡತೊಡಗಿದರು . ನನಗೆ ಸರಿಯಾಗಿ ಆಹಾರ ಕೂಡ ನೀಡುತ್ತಿರಲಿಲ್ಲ . ನಾನು ಹೊಂದಾಣಿಕೆ ಮಾಡಿಕೊಯಿ ವೈವಾಹಿಕ ಜೀವನ ಮಾಡುವಂತೆ ಹಲವಾರು ಬಾರಿ ಎದುರುದಾರರನ್ನು ಕೇಳಿಕೊಂಡರೂ ಸಹ ಅದಕ್ಕೆ ಅವನು ಒಪ್ಪುತ್ತಿರಲಿಲ್ಲ .

2. ಎದುರುದಾರನ ಹಾಗೂ ಆತನ ಅಕ್ಕತಂಗಿ ಸೇರಿಕೊಂಡು 15 ದಿನಗಳಲ್ಲಿ ನನಗೆ ಹಚ್ಚಿನ ಹಣ ವರದಕ್ಷಿಣೆ ತರುವಂತೆ ಪೀಡಿಸಿ ತವರು ಮನೆಯಿಂದ ವರದಕ್ಷಿಣೆ ರೂಪದಲ್ಲಿ 10 ತೊಲೆ ಬಂಗಾರ ತರುವಂತೆ ಇಲ್ಲವಾದಲ್ಲಿ ಮನೆಯಿಂದ ಹೊರಗೆ ಹಾಕುವುದಾಗಿ ಧಮ್ಕಿ ಹಾಕಿದ್ದು ಇರುತ್ತದೆ . ಅದಕ್ಕೆ ನಾನು ಒಪ್ಪದೇ ಇದ್ದಾಗ ನನ್ನನ್ನು ಹೊಡೆದು ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ನೀಡಿ ಅವಾಚ್ಯ ಶಬ್ದದಿಂದ ರಾಂಡಕಿ , ಚಿನಾಲಗಿ ಅಂತ ಬೈದು ಹಣ ತರದಿದ್ದಲ್ಲಿ ಜೀವಸಹಿತ ಉಳಿಸುವುದಿಲ್ಲವಾಗಿ ಜೀವ ಬೆದರಿಕೆ ಹಾಕಿ ತವರು ಮನೆಗೆ ಕಳಿಸಿರುತ್ತಾರೆ . ನನಗೆ ಆದ ಮಾನಸಿಕ ಹಾಗೂ ದೈಹಿಕ ಹಿಂಸೆ ತಾಳಲಾರದೇ ದಿನಾಂಕ 28-04-2016 ರಂದು ಜಮಾತಿನಲ್ಲಿ ತಿಳಿಸಿರುತ್ತೇನೆ . ಅದರಂತೆ ಜಮಾತಿನವರು ದಿನಾಂಕ 31-05-2016 ರಂದು ಪಂಚರ ಸಭೆ ಸೇರಿ ಎದುರದಾರನನ್ನು ಕರೆದು ಬುದ್ಧಿವಾದ ಹೇಳಿರುತ್ತಾರೆ . ಎದುರುದಾರನು ನನಗೆ ಬೇರೆ ಮನೆ ಮಾಡಿ ಹಣ ತರುವತನಕ ಒಬ್ಬಳಿಗೆ ಕೂಡಿಹಾಕಿಡುವೆ ಎಂದು ಮನೆಯಿಂದ ಬೇರೆ ಮನೆ ಮಾಡಿ ನನಗೆ ಇಟ್ಟಿರುತ್ತಾನೆ . ಎದುರುದಾರನು ಸಾರಾಯಿ ಕುಡಿದು ಬಂದು ಕೂಗಾಡುವುದು , ವಿನಾಕರಣ ಪಾಲಕರು ಹಾಗೂ ಹಿತೈಷಿಗಳನ್ನು ಬೈಯುವುದು ಹೊಡೆಯುದು ಮಾಡಿ ಅಸಹ್ಯವಾದ ಶಬ್ದಗಳನ್ನು ಉಪಯೋಗಿಸಿ ನಿಂದಿಸಲು ಆರಂಭಿಸಿದನು . ಎದುರುದಾರನು ಲಕ್ಷಗಟ್ಟಲೆ ಹಣ ಕೊಡುವವರಿದ್ದರು ನಾನು ಹಣ ಮತ್ತು ಬಂಗಾರ ತರದಿದ್ದರೆ ಎದುರುದಾರನು ಬೇರೆ ಮದುವೆಯಾಗುವುದಾಗಿ ಧಮಕೀ ನೀಡುತ್ತಿದ್ದ . ನನ್ನ ಪಾಲಕರು ಸಾಲಸೋಲ ಮಾಡಿ ಕಷ್ಟಪಟ್ಟು ತನ್ನ ಮಗಳು ಸುಖವಾಗಿರಲೆಂದು ತಮ್ಮ ಕೈಲಾದಷ್ಟು ಹಣ ಬಂಗಾರ ಹೊಂದಿಸಿ ಎದುರುದಾರಿನಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ . ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು ಎದುರುದಾರನು ಮತ್ತೆ ತನ್ನ ಅಕ್ಕತಂಗಿಯವರೊಂದಿಗೆ ಸೇರಿಕೊಂಡು ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ್ದು ಅದಕ್ಕೆ ನಾನು ಮತ್ತೆ ಜಮಾತಿನಲ್ಲಿ ತಿಳಿಸಿದಾಗ ಅವರು ದಿನಾಂಕ

04-06-2019 ರಂದು ಎದುರುದಾರನಿಗೆ ಬದ್ದಿವಾದ ತಿಳಿಸಿರುತ್ತಾರೆ . ನಾನು ನನ್ನ ತಂದೆ ಹಾಗೂ ಕೆಲವು ಹಿತೈಷಿಗಳನ್ನು ಕರೆದುಕೊಂಡು ಎದುರುದಾರಿನಿಗೆ ಸಮಜಾಯಿಸಿ ತಿಳಿಸಿ ಹೇಳಲಾಗಿ ತಾನು ಚೆನ್ನಾಗಿ ನೋಡಿಕೊಳ್ಳುವುದಾಗಿ ತಿಳಿಸಿದ್ದು ನನ್ನನ್ನು ಎದುರುದಾರನ ಮನೆಯಲ್ಲಿ ಬಿಟ್ಟುರುತ್ತಾರೆ . ದಿನಾಂಕ 29-06-2016 ರಂದು ನೂರಾನಿ ಮಸೀದಿಯಲ್ಲಿ ಎದುರುದಾರನು ಪಂಚರ ಸಮ್ಮುಖದಲ್ಲಿ ಎಲ್ಲರನ್ನು ಸಭೆ ಸೇರಿಸಿ ಜಮಾತಿನ ಸಮಕ್ಷಮ ಎಲ್ಲರ ಎದುರಿಗೆ ತಾನು ನನ್ನ ಜೊತೆ ಯಾವುದೇ ಕಾರಣಕ್ಕೂ ಜೀವನ ನಡೆಸುವುದಿಲ್ಲ ಇವೆಲ್ಲಕೂ ಮೊದಲು ತಲಾಖ್ , ತಲಾಖ್ , ತಲಾಖ್ ಹೇಳಿ ತಲಾಖ್ ಕೊಟ್ಟಿದ್ದೇನೆ ಎದು ಎಲ್ಲರ ಸಮಕ್ಷಮ ತಿಳಿಸಿದಾಗ ಜಮತಿನವರರು ಪರ್ಯಿತ ಮುಸ್ಲಿಂ ಕಾನೂನಿನ ಪ್ರಕಾರ ತಲಾಖಿ ಆಗಿರುತ್ತದೆಂದು ನನಗೆ ಒತ್ತಾಯ ಪೂರ್ವಕ ಜಬರದಸ್ತಿನಿಂದ ತಲಾಖ್ ಒಪ್ಪಿಕೊಳ್ಳುವಂತೆ ಒತ್ತಾಯ ಮಾಡಿರುತ್ತಾರೆ . ನಂತರ ಜಮಾತಿನವರು ನನಗೆ ಇದ್ದತ್ ಎಂದು 4 ತಿಂಗಳು 10 ದಿನ ಹಾಗೂ ಮೊತ್ತ 21,500/- ನ್ನು ಜೀವನಾಂಶ ಹಾಗೂ ನನಗೆ ಕೊಟ್ಟ 60,000/- ಗಳನ್ನು ಒಟ್ಟು ಮೊತ್ತ ಸೇರಿ 2,81,500/- ಗಳನ್ನು ಜಮಾತಿನಲ್ಲಿ ಎದುರುದಾರನು ನನಗೆ ಕೊಡುವಂತೆ ತಿಳಿಸಲಾಗಿತ್ತು . ನನಗೆ ಒತ್ತಾಯ ಪೂರ್ವಕವಾಗಿ ಒಪ್ಪಸಿದ್ದರೂ ಎದುರುದಾರನು ಜಮಾತಿನಲ್ಲಿ ನಿರ್ಣಯಿಸಿದ ಹಣ ನೀಡದೆ ನನಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿ ನನ್ನನ್ನು ಹೊಡೆದು ಅವಾಚ್ಯ ಶಬ್ದದಿಂದ ಬೈದು ಮನೆಯಿಂದ ಹೊರಹಾಕಿದ್ದಾನೆ .

3. ನನಗೆ ಯಾವುದೇ ಆದಾಯವಾಗಲೀ ಆದಾಯದ ಮೂಲವಾಗಲೀ ಇರುವುದಿಲ್ಲ ನಾನು ಸಾಲ ಸಹ ಮಾಡಿ ಬಾಡಿಗೆ ಮನೆಯಲ್ಲಿ ಜೀವನ ನಡೆಸುತ್ತಿದ್ದೇನೆ . ಇಂದಿನ ತುಟ್ಟಿ ಕಾಲದಲ್ಲಿ ನನಗೆ ಹೊಟ್ಟೆ ಬಟ್ಟೆ ಔಷದೋಪಚಾರಗಳಿಗೆ ಬಾಡಿಗೆ ಮನೆಯಲ್ಲಿ ಉಳಿದು ಬರಲುದ ಮನುಷ್ಯನ ಕನಿಷ್ಠ ಬೇಡಿಕೆ ಪೂರೈಸುವಲ್ಲಿ ಕಡಿಮೆ ಅಂದರೂ ರೂ 10,000/- ಅವಶ್ಯಕತೆ ಇದೆ .

ನನ್ನ ಜೀವನೋಪಾಯಕ್ಕಾಗಿ ಸದ್ರಿ ಅರ್ಜಿ ಎದುರುದಾರನ ವಿರುದ್ಧ ಸಲ್ಲಿಸಿರುತ್ತೇನೆ . ಎದುರುದಾರನಿಗೆ ನನಗೆ ಜೀವನಾಂಶ ಕೊಡಲು ಸಕ್ಷಮರಿದ್ದಾನೆ . ಕಾರಣ ಅರ್ಜಿಯಲ್ಲಿ ಕೇಳಿದಂತೆ ನನಗೆ ಜೀವನಾಂಶವನ್ನು ನೀಡಲು ಪ್ರಾರ್ಥಿಸುತ್ತೇನೆ .

ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದುದ , ಸಮಯ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಲಾಯಿತು.)

ಓ.ಹೆ.ಕೆ.ಸರಿ ಇದೆ.

1 ನೇ ಹೆಚ್ಚುವರಿ ನ್ಯಾಯಾಧೀಶರು ಶಿರಸಿ.